**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 29.08.2024
ಪಾಟಿ ಸವಾಲು : ಆರೋಪಿ ಪರ ವಕೀಲರಿಂದ

ನಿಪಿ.6 ಜವಾಬು ನೋಟೀಸ್ ಅನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ಸದರಿ ಜವಾಬು ನೋಟೀಸ್ ನಲ್ಲಿ ನಿಮ್ಮ ಹೆಂಡತಿ ಚೀಟಿ ನಡೆಸುತ್ತಿದ್ದರು ಎಂದು ಆರೋಪಿಯು ಅವರ ವಕೀಲರ ಮುಖಾಂತರ ಬರೆಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ಸದರಿ ಚೀಟಿ ವ್ಯವಹಾರಕ್ಕ ಸಂಬಂಧಿಸಿದಂತೆ ಚೀಟಿ ಹಣವನ್ನು ಎತ್ತಿಕೊಂಡ ಸಂದರ್ಭದಲ್ಲಿ ಆರೋಪಿಯು ಅದರ ಭದ್ರತೆಗಾಗಿ ನಿಪಿ.1 ಚೆಕ್ ನೀಡಿದ್ದು ಸದರಿ ಚೀಟಿ ಮುಗಿದ ನಂತರ ಅದನ್ನು ನಿಮ್ಮ ಹೆಂಡತಿಯು ಆರೋಪಿಗೆ ವಾಪಸ್ಸು ನೀಡದೇ ನಿಮ್ಮ ಮುಖಾಂತರ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಾನು ಖಾಸಗಿ ಬಸ್ ಚಾಲನೆ ಮಾಡುತ್ತೇನೆ. ಖಾಸಗಿ ಬಸ್ ಚಾಲನೆ ಮಾಡಲು ವಾಹನ ಚಾಲನಾ ಪರವಾನಿಗೆ ಜೊತೆಗೆ ಬ್ಯಾಡ್ಜ ಸಹ ಇರುತ್ತದೆ ಎಂದರೆ ಸರಿ. ಸದರಿ ಬ್ಯಾಡ್ಜ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಪ್ರಸ್ತುತ ನೀವು ಬಸ್ ಚಾಲನೆ ಮಾಡುತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಒಂದು ಸ್ವಂತ ಆಟೋ ಇಟ್ಟುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಆಟೋ ಇಟ್ಟುಕೊಂಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇರುವುದಿಲ್ಲ.

ನೀವು ಯಾವುದೇ ಬಸ್ ಓಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಮಗೆ ಸೇರಿದ ಯಾವುದೇ ಆಟೋ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ